ಪ್ರವಾಸ

# ಕಣಿವೆಯೊಳಗಿನಿಂದ ಇಣುಕುವ ಜಲಪಾತ

# ಸಂಧನ್ ಸುಂದರಿ

■ **ರಮಣ್ ಶೆಟ್ಟಿ ರೆಂಜಾಳ್**



ಪಶ್ಚಿಮ ಘಟ್ಟಗಳ ಸಹ್ಯಾದ್ರಿ ಪರ್ವತಶ್ರೇಣಿಯ ನಯನಮನೋಹರ ಕಣಿವೆಗಳಲ್ಲೊಂದು ಸಂಧನ್. ಈ ಕಣಿವೆ ಮಹಾರಾಷ್ಟ್ರದ ಇಗತ್‌ಪುರಿಯ ಬಳಿಯ ಭಂಡಾರ್‌ಧಾರಾದ ಸನಿಹದಲ್ಲಿದೆ. ವರ್ಷಪೂರ್ತಿ ಈ ಕಂದರದೊಳಗೆ ಸೂರ್ಯಕಿರಣಗಳು ತಲುಪುವುದಿಲ್ಲವಾದ್ದರಿಂದ ಇದು 'ನೆರಳುಗಳ ಕಣಿವೆ' ಎಂದೇ ಪ್ರಸಿದ್ಧಿ.

ಸಹ್ಯಾದ್ರಿ ಶ್ರೇಣಿಯಲ್ಲಿ ಅತ್ಯಂತ ಕ್ಲಿಷ್ಟಕರ ಆದರೆ ಅಷ್ಟೇ ರೋಮಾಂಚಕ ಟ್ರೆಕ್ಕಿಂಗ್‌ಗಾಗಿ ಸಂಧನ್ ಹೆಸರುವಾಸಿ. ನೇರ ಇಳಿಜಾರಿನ ಪ್ರಪಾತದಲ್ಲಿ 200 ಅಡಿ ಆಳದೊಂದಿಗೆ 2 ಕಿ.ಮೀ. ಉದ್ದಕ್ಕೆ ಇದು ಚಾಚಿಕೊಂಡಿದೆ. ಸಹಸ್ರಾರು ವರ್ಷಗಳಿಂದ ಮಳೆಗಾಲದಲ್ಲಿ ಆಸುಪಾಸಿನ ಪರ್ವತಶೃಂಗಗಳಿಂದಿಳಿದು ಉಗ್ರರೂಪದಲ್ಲಿ ಸಾಗಿಬರುವ ಕಾಡಿನ ನೀರ ತೊರೆಗಳಿಂದ ಈ ಕೊರಕಲು ಕಣಿವೆ ರೂಪುಗೊಂಡಿದೆ. ಕಣಿವೆಯೊಳಗಡೆ ಅಲ್ಲಲ್ಲಿ 2ರಿಂದ 4ಅಡಿ ಆಳದ ನೀರಿನ ಕೊಳಗಳು, ಜಾರುವ ಮತ್ತು ಕೊರಕಲು ಬಂಡೆಗಳಿದ್ದು, ಕೆಲವೆಡೆ ಹಗ್ಗದ ಏಣಿ ಹಾಗೂ ಇನ್ನು ಕೆಲವೆಡೆ ತೆವಳಿ, ಈಜಿಕೊಂಡು ಹೋಗುತ್ತಾ ನಾಲ್ಕು ಗಂಟೆಗಳಲ್ಲಿ ಕ್ಯಾಂಪಿಂಗ್ ಸ್ಪಾಟ್ ತಲುಪಬಹುದು. ಅಲ್ಲಿಂದ ಕಾಣುವ ಬನ್ ಪಿನಾಕಲ್ ಮತ್ತು ಅಜೋಬಾ ಎನ್ನುವ ಬೆಟ್ಟದ ದೃಶ್ಯ ಬಹುಮೋಹಕ

## ಹೋಗುವುದು ಹೇಗೆ?

ಈ ಜಲಪಾತ ಮುಂಬೈಯಿಂದ 200 ಕಿ.ಮೀ. ದೂರದಲ್ಲಿದೆ. ಸುಮಾರು 5 ಗಂಟೆಗಳ ಪ್ರಯಾಣದ ಹಾದಿ. ಎರಡು ದಿನಗಳ ಪಿಕ್ನಿಕ್ ಹಮ್ಮಿಕೊಳ್ಳಲು ಸೂಕ್ತವಾದ ತಾಣವಿದು. ಮುಂಬೈ ನಾಸಿಕ್ ಹೆದ್ದಾರಿಯಲ್ಲಿ ಇಗತ್‌ಪುರಿಯಿಂದ ಬಲಕ್ಕೆ ತಿರುಗಿದರೆ, ಭಂಡಾರ್‌ಧಾರಾದ ಬಳಿಯ ಸಮ್ರೃದ್ ಗ್ರಾಮದ ಈ ಪ್ರವಾಸೀ ತಾಣ ತಲುಪಬಹುದಾಗಿದೆ. ಪ್ರವಾಸಿಗರಿಗಾಗಿ ಅಹ್ಮದ್ ನಗರ ಜಿಲ್ಲೆಯ ಸಮ್ರೃದ್ ಎಂಬ ಹಳ್ಳಿಯಲ್ಲಿ ಹೋಂ ಸ್ಟೇ ಸೌಲಭ್ಯವಿದೆ. ಭಂಡಾರ್‌ಧಾರಾದಲ್ಲಿ ಹೊಟೆಲ್ ಮತ್ತು ರೆಸಾರ್ಟ್‌ಗಳು ಕೂಡ ಇವೆ.

## ಕಣಿವೆಯೊಳಗಿನ ಸುಂದರಿ

ಮಳೆಗಾಲದಲ್ಲಿ ಇಲ್ಲಿನ ಹಲವಾರು ಜಲಪಾತಗಳು ಮೈದುಂಬಿಕೊಂಡು ಜೀವಂತಿಕೆ ಪಡೆದು ತಮ್ಮ ವೈಭವ ಮೆರೆಯುತ್ತವೆ. ಅವುಗಳಲ್ಲೊಂದಾದ ಸಂಧನ್ ಜಲಪಾತವು 'ರಿವರ್ಸ್ ಜಲಪಾತ'ವೆಂದು ಹೆಸರುವಾಸಿಯಾಗಿದೆ. ಈ ಜಲಪಾತದಿಂದ ಧುಮ್ಮಿಕ್ಕುವ ಜಲಧಾರೆಯಲ್ಲಿ, ಕೆಲವೊಮ್ಮೆ ಕಣಿವೆಯೊಳಗಿಂದ ಹಾಗೂ ಎದುರಿಂದ ಬೀಸುವ ಗಾಳಿಯ ರಭಸಕ್ಕೆ ಭೂಮಿಯ ಕಾಂತೀಯ ಶಕ್ತಿ ಸೋತು, ಹರಿಯುವ ನೀರಿನ ಓಘ ತಡೆಯಲ್ಪಟ್ಟು, ವಿರುದ್ಧ ದಿಕ್ಕಿನಲ್ಲಿ ತುಂತುರು ತುಂತುರಾಗಿ ಮೇಲಕ್ಕೆ ಸರಿಯುವ ದೃಶ್ಯ ನೋಡುವುದೇ ಒಂದು ಅದ್ಭುತ ಅನುಭವ.

ವರ್ಷಋತುವಿನಲ್ಲಿ ಪ್ರವಾಹೋಪಾದಿಯಲ್ಲಿ ಸಂಧನ್ ಕಣಿವೆಯೊಳಗಿಂದ ನೀರು ಹರಿದುಹೋಗುವುದರಿಂದ ಮಳೆಗಾಲದಲ್ಲಿ ನವೆಂಬರ್ ತಿಂಗಳ ತನಕ ಟ್ರೆಕ್ಕಿಂಗ್ ಅಲ್ಲಿ ನಿಷಿದ್ಧ. ನವೆಂಬರ್ ನಂತರ ಮೇ ತಿಂಗಳವರೆಗೆ ಟ್ರೆಕ್ಕಿಗರ ದಂಡೇ ಇಲ್ಲಿ ಮೇಳೈಸುತ್ತದೆ. ಟ್ರೆಕ್ಕಿಂಗ್ ಹೊರತಾಗಿ ಜಲಪಾತಗಳನ್ನು ವೀಕ್ಷಿಸಲು ಮಳೆಗಾಲ ಸೂಕ್ತ.

ಪ್ರತಿಕ್ರಿಯಿಸಿ: feedback@sudha.co.in

